OS No. 838/2014
PW-1

ಪ್ರಮಾಣ ವಚನ ಬೋಧಿಸಿದ ದಿನಾಂಕಃ **03/10/2018**
ಪಾಟೀ ಸವಾಲುಃ ಶ್ರೀ. ಬಿ ವಿ ಪಿ ವಕೀಲರಿಂದ.

**1.** ಪ್ರತಿವಾದಿಯ ವಿರುದ್ಧ ಈ ಮೊದಲು ಓ ಎಸ್ **533/2003** ರಂತೆ ಬೆಳಗಾವಿಯ **1** ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯದಲ್ಲಿ ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿ. ಆ ದಾವೆಯನ್ನು ನಾನು ಮತ್ತು ನನ್ನ ಸಹೋದರಿ ಸುಮಿತ್ರಾ ಸೇರಿ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ನಾನು **10** ನೇ ತರಗತಿವರೆಗೆ ಓದಿರುತ್ತೇನೆ ಮತ್ತು ನನಗೆ ಸ್ವಲ್ಪ ಸ್ವಲ್ಪ ಇಂಗ್ಲಿಷ ಓದಲು ಬರುತ್ತದೆ. ಓ ಎಸ್ **533/2003** ರಲ್ಲಿ ನಾನು ನನ್ನ ಸಹೋದರಿ ಸುಮಿತ್ರಾರವರ ಪವರ್ ಆಫ್ ಅಟಾರ್ನಿ ಹೊಲ್ಡರ ಆಗಿರುತ್ತೇನೆ ಎಂದರೆ ಸರಿಯಲ್ಲ. ಓ ಎಸ್ 533/2003 ರಲ್ಲಿ ನನ್ನ ವಾದ ಪತ್ರದ ದೃಢಿಕೃತ ನಕಲನ್ನು ನೋಡುತ್ತಿದ್ದು ಅದರಲ್ಲಿ ನನ್ನ ಸಹಿಗಳನ್ನು ನೋಡಿ ಗುರುತಿಸಿರುತ್ತೇನೆ. ಸದರಿ ವಾದ ಪತ್ರದ ದೃಢಿಕೃತ ನಕಲನ್ನು ನಿಡಿ-1 ಹಾಗೂ ಅದರಲ್ಲಿ ಸಾಕ್ಷಿ ಗುರುತಿಸಿದ 2 ಸಹಿಗಳನ್ನು ನಿಡಿ-1 ಎ ಹಾಗೂ ನಿಡಿ-1 ಬಿ ಎಂದು ಗುರುತಿಸಲಾಯಿತು. ಆ ದಾವೆಯಲ್ಲಿ ನನ್ನ ಸಾಕ್ಷಿ ವಿಚಾರಣೆ ಆಗಿರುತ್ತದೆ ಎಂದರೆ ಸರಿಯಲ್ಲ. ನನಗೆ ತೋರಿಸುತ್ತಿರುವ ದಾಖಲಾತಿಯು ಓ ಎಸ್ 533/2003 ಯಲ್ಲಿ ನಾನು ಸಲ್ಲಿಸಿರುವ ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರ ಹಾಗೂ ಪಾಟೀ ಸವಾಲಿನ ದೃಢಿಕೃತ ನಕಲು ಆಗಿದ್ದು ಅದರಲ್ಲಿ ನಾನು ಸಾಕ್ಷಿಯಾಗಿ ಸಹಿಗಳನ್ನು ಮಾಡಿರುತ್ತೇನೆ ಎಂದರೆ ಸರಿ. ಸದರಿ ಸಾಕ್ಷ್ಯ ದೃಢಿಕೃತ ನಕಲನ್ನು ಒಟ್ಟಾಗಿ ನಿಡಿ-2 ಎಂದು ಗುರುತಿಸಲಾಯಿತು. ಆ ದಾವೆಯಲ್ಲಿ ಪ್ರತಿವಾದಿ ಪರ ವಕೀಲರು ನನ್ನನ್ನು ಪಾಟೀ ಸವಾಲು ಮಾಡಿರುತ್ತಾರೆ ಎಂದರೆ ಸರಿ. ಆ ದಾವೆಯಲ್ಲಿ ನಿಪಿ-1 ರಂತೆ ರಾಜೀ ಡಿಕ್ರಿಯಾಗಿರುತ್ತದೆ ಎಂದರೆ ಸರಿ. ಸದರಿ ರಾಜೀ ಡಿಕ್ರಿಯನ್ನು ಪ್ರಶ್ನಿಸಿ ಈ ವರೆಗೂ ಯಾವುದೇ ಪ್ರಾಧೀಕಾರದ ಮುಂದೆ ಮೇಲ್ಮನವಿಯನ್ನು ಸಲ್ಲಿರುವುದಿಲ್ಲ ಎಂದರೆ ಸರಿ.

OS No. 838/2014
PW-1

ಓ ಎಸ್ 533/2003 ಯಲ್ಲಿ ಕೇಳಿರುವ ಪರಿಹಾರ ಮತ್ತು ಈ ದಾವೆಯಲ್ಲಿ ಕೇಳಿರುವ ಪರಿಹಾರ ಒಂದೇಯಾಗಿರುತ್ತದೆ ಎಂದರೆ ಸರಿಯಲ್ಲ. ಎರಡೂ ಪರಿಹಾರಗಳು ಒಂದೇ ಆಗಿದ್ದರೂ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಓ ಎಸ್ 533/2003 ಯಲ್ಲಿ ನನಗೆ ಮಾಡಿರುವ ಪಾಟೀ ಸವಾಲನ್ನು ಈ ದಾವೆಯಲ್ಲಿ ಪಾಟೀ ಸವಾಲು ಎಂದು ಪರಿಗಣಿಸಲು ನನಗೆ ಆಕ್ಷೇಪಣೆ ಇರುವುದಿಲ್ಲ ಎಂದರೆ ಸರಿ. ನಿಪಿ-1 ರ ರಾಜೀ ಡಿಕ್ರಿಯನ್ನು ಜಾರಿಗೆ ತರಲು ಅಮಲ ಜಾರಿ ಅರ್ಜಿಯನ್ನು ಸಲ್ಲಿಸಿರುವುದಿಲ್ಲ ಎಂದರೆ ಸರಿ. ಯಾವುದೇ ಅಧಿಕಾರ ಇಲ್ಲದೇ ಇದ್ದರೂ ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಈಗ ವಯಸ್ಸಾಗಿರುವುದರಿಂದ ಮತ್ತು ಪ್ಯಾರಾಲೈಸಸ್ ಆಗಿರುವುದರಿಂದ ಸಹಿ ಮಾಡಲು ಬರುವುದಿಲ್ಲ. ಮೊದಲು ನಾನು ಸಹಿಯನ್ನು ಮಾಡುತ್ತಿದ್ದೇನು. ಈಗ ಹೆಬ್ಬೆಟ್ಟು ರುಜು ಮಾಡುತ್ತೇನೆ.

ಮರು ವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿಯಿದೆ.
ಸಹಿ/-
ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ,
ಜೆ. ಎಂ. ಎಫ್. ಸಿ., ಬೆಳಗಾವಿ.